ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/10/ಸಿಸಿಟೆಕ್/2018-19/928

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:14-06-2018

**-: ಸುತ್ತೋಲೆ :-**

ವಿಷಯ: ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ ಸಂಸ್ಥೆಯಲ್ಲಿ ಸಿಸಿಟೆಕ್ ಉಪಘಟಕದ ವತಿಯಿಂದ ಆಯೋಜಿಸುತ್ತಿರುವ ಅಲ್ಪಾವಧಿ ತರಬೇತಿ ನಡೆಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/10/ಸಿಸಿಟೆಕ್/2017-18/952, ದಿನಾಂಕ: 14-07-2017.
2. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/26/ಸಿಸಿಟೆಕ್/2017-18, ದಿನಾಂಕ: 05-09-2017.
3. ಪ್ರಾಚಾರ್ಯರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ ಇವರ ಪತ್ರ ಸಂಖ್ಯೆ: ಸಮಪಾ/ಸಿಸಿಟೆಕ್/18-19/111, ದಿ:01-06-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ ಇಲ್ಲಿ ಸಿಸಿಟೆಕ್ ಉಪಘಟಕದ ಮೂಲಕ ವಿವಿಧ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿ ವರ್ಗದವರಿಗೆ ದಿನಾಂಕ:15-06-2018 ರಿಂದ 20-06-2018ರ ವರೆಗೆ "e-lab Manual Preparation using Instructional Technology ಮತ್ತು ದಿನಾಂಕ:21-06-2018 ರಿಂದ 25-06-2018ರ ವರೆಗೆ Authoring Tools in Multimedia" ಎಂಬ ವಿಷಯದ ಬಗ್ಗೆ (ಹುಬ್ಬಳ್ಳಿಯಲ್ಲಿ ಕೇಂದ್ರಿಯ ಮೌಲ್ಯ ಮಾಪನದ ಸಮಯದಲ್ಲಿ 4.30PM to 7.45PM ರವರೆಗೆ) ಉಲ್ಲೇಖ (1)ರ ಈ ಕಛೇರಿ ಸುತ್ತೋಲೆಯಲ್ಲಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಲು ಮತ್ತು **ಉಲ್ಲೇಖ (2)ರಂತೆ ತರಬೇತಿ ಸಂಸ್ಥೆ ಮತ್ತು ಅಭ್ಯರ್ಥಿಗಳ ನೊಂದಣಿಯನ್ನು ಆಧಾರ್ ಕಾರ್ಡ್ ಸಂಖ್ಯೆಯ ಜೊತೆಯಲ್ಲಿ www.kaushalkar.com ಆನ್ ಲೈನ್ ಮೂಲಕ ನೊಂದಾಯಿಸಲು ಕಡ್ಡಾಯಗೊಳಿಸಿ** ಹಾಗೂ ಸದರಿ ತರಬೇತಿಗೆ ಹಾಜರಾಗುವ ಸಂಬಂಧ ಗರಿಷ್ಠ 30 ಅಭ್ಯರ್ಥಿಗಳಿಗೆ ಸೀಮಿತಗೊಳಿಸಿ, ತರಬೇತಿಗೆ ನೊಂದಾಯಿಸಿಕೊಂಡ ಬೋದಕ ಸಿಬ್ಬಂದಿ ವರ್ಗದವರ ಪಟ್ಟಿಗೆ ತರಬೇತಿ ಪ್ರಾರಂಭಿಸುವ ದಿನಾಂಕದ ಒಳಗೆ ಕಡ್ಡಾಯವಾಗಿ ಇಲಾಖೆಯಿಂದ ಅನುಮತಿ ಪಡೆದು ನಂತರ ತರಬೇತಿ ನಡೆಸುವುದು ಹಾಗೂ ತರಬೇತಿ ನಡೆಯುವ ಸಮಯದಲ್ಲಿ ಬೋಧಕ ಸಿಬ್ಬಂದಿಯವರಿಂದ ಪ್ರಾರಂಭದ ಸಮಯ 4.30PM ಮತ್ತು ಮುಕ್ತಾಯದ ಸಮಯ 7.45PM ಗೆ ಖಡ್ಡಾಯವಾಗಿ ಹಾಜರಾತಿಯಲ್ಲಿ ಸಹಿ ಪಡೆಯಲು ಸಹ ಸೂಚಿಸಿದೆ ಮತ್ತು ಈ ತರಬೇತಿಯಿಂದ ಮುಂದಿನ ದಿನಗಳಲ್ಲಿ ಯಾವುದಾದರು ತಾಂತ್ರಿಕ ಸಮಸ್ಯೆಗಳು ಉಂಟಾಗದಂತೆ ಪ್ರಾಂಶುಪಾಲರು ಎಚ್ಚರಿಕೆ ವಹಿಸಬೇಕೆಂದು ಹಾಗೂ ಮುಂದೆ ತರಬೇತಿಯ ಸಾದಕ ಬಾದಕಗಳಿಗೆ ಪ್ರಾಂಶುಪಾಲರು ಹೊಣೆಗಾರರಾಗುತ್ತಾರೆ ಎಂಬ ಷರತ್ತಿಗೊಳಪಟ್ಟು ಉಲ್ಲೇಖ (3)ರ ಪತ್ರದಲ್ಲಿ ಕೋರಿರುವಂತೆ ಅಲ್ಪಾವಧಿ ತರಬೇತಿ ಕಾರ್ಯಕ್ರಮ ನಡೆಸಲು ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಕೋರ್ಸನಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ನೀಡಲಾಗುವ Course/Study Material (1Set) ಅನ್ನು ಜಂಟಿ ನಿರ್ದೇಶಕರು (ಸಿಡಿಸಿ) ವಿಭಾಗಕ್ಕೆ ಕಳುಹಿಸಲು ಸೂಚಿಸಿದೆ.

ಸದರಿ ಅಲ್ಪಾವಧಿ ತರಬೇತಿಗೆ ಹಾಜರಾಗಲು ಇಚ್ಛಿಸುವ ಬೋಧಕ ಸಿಬ್ಬಂದಿ ವರ್ಗದವರು, ತರಬೇತಿಗೆ ಅರ್ಜಿ ಸಲ್ಲಿಸಿ ನೊಂದಾಯಿಸಿಕೊಳ್ಳುವ ಸಲುವಾಗಿ ಕಾರ್ಯಕ್ರಮದ Co-ordinator, ಶ್ರೀ ಎಮ್. ಓ. ಕಿರಣಕುಮಾರ, ಮೊಬೈಲ್ ಸಂಖ್ಯೆ:9448923928 ಮತ್ತು CCTEK Manager, ಶ್ರೀಮತಿ ಚಂದಾ ಕುಲಕರ್ಣಿ, ಮೊಬೈಲ್ ಸಂಖ್ಯೆ: 7899425075 ಇವರನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸದರಿ ತರಬೇತಿ ಕಾರ್ಯಕ್ರಮ ನಡೆಸಲಾದ ಒಂದು ತಿಂಗಳೊಳಗಾಗಿ ತರಬೇತಿಯ ಸಲುವಾಗಿ ಪಡೆದ ಶುಲ್ಕ, ಖರ್ಚು ವೆಚ್ಚಗಳ ಪಟ್ಟಿ, ಭಾಗವಹಿಸಿದ ಅಭ್ಯರ್ಥಿಗಳ ಪಟ್ಟಿಯೊಂದಗೆ ಸಮಗ್ರ ವರದಿಯನ್ನು ಹಾಗೂ ಲಾಭಾಂಶದ ಶೇ.25ರ ಮೊತ್ತವನ್ನು ಡಿ.ಡಿ. ಮೂಲಕ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ /ಕಾರ್ಯದರ್ಶಿಗಳು, ನಿರಂತರ ತಾಂತ್ರಿಕ ಶಿಕ್ಷಣ ಕೇಂದ್ರ, ಬೆಂಗಳೂರು ಇವರ ಹೆಸರಿಗೆ ಸಂದಾಯವಾಗುವಂತೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ: ಪ್ರಾಚಾರ್ಯರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ,

1. ಸಹಾಯಕ ನಿರ್ದೇಶಕರು/ಅಭಿವೃದ್ಧಿ ಅಧಿಕಾರಿಗಳು (ಸಿಸಿಟೆಕ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು ಸದರಿ ತರಬೇತಿ ನಡೆಯುವ ಸಮಯದಲ್ಲಿ ಒಂದು ಅಥವಾ ಎರಡು ಭಾರಿ ಸಂಸ್ಥೆಗೆ ಭೇಟಿ ನೀಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.
2. ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮುಂದಿನ ಕ್ರಮಕ್ಕಾಗಿ.
3. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿ.ಟಿ.ಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.